**ಸಾಕ್ಷಿಯನ್ನು ದಿಃ02.12.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃಪ್ರತಿವಾದಿ ಪರ ವಕೀಲರಿಂದಃ**

1. ನನಗೆ ಪ್ರತಿವಾದಿ ಮಹಾಲಿಂಗಪ್ಪ ನವರು ಪರಿಚಯ. ಅವರ ಊರು ದೊಡ್ಡ ಕಮರವಳ್ಳಿ ಅವರ ತಂದೆ ಹೆಸರು ನನಗೆ ಗೊತ್ತಿಲ್ಲ.

2. ಬಸವರಾಜು ರವರ ಮಗ ಮಂಜುನಾಥ ಬಿ. ಎಂದರೆ ನಾನೆ.

3. ನಿಪಿ - 13 ಕ್ಕೆ ಯಾವ ದಿನಾಂಕ ನೀವು ಸಹಿ ಮಾಡಿದ್ದೀರಾ ಎಂದರೆ, ದಿನಾಂಕ ನೆನಪಿಲ್ಲ.

4. ಹರೀಶಪ್ಪನವರಿಗೆ ಜಮೀನು ಕ್ರಯ ಆಗಿತ್ತು ಮೊದಲು 20 ಸಾವಿರ ಮಾತುಕತೆಯಾಗಿ, ನಂತರ 20 ಸಾವಿರ ಹಣ ಮಹಾಲಿಂಗಪ್ಪನವವರಿಗೆ ಹರೀಶ ರವರು ನೀಡುವ ಸಮಯದಲ್ಲಿ ಸಹಿ ಮಾಡಿದ್ದೇನೆ. ನನ್ನ ಜೊತೆ ಲಕ್ಷ್ಮೀನಾರಾಯಣ ಹಾಗೂ ಸುರೇಶ ರವರು ಸಹಿ ಹಾಕಿರುತ್ತಾರೆ. ಸದರಿ ವ್ಯವಹಾರ ಬಿಟ್ಟರೆ ಬೇರೆ ವ್ಯವಹಾರ ನನಗೆ ಗೊತ್ತಿಲ್ಲ.

5. ನಿಪಿ - 13 ಕ್ಕೆ ನಾನು ಪಿರಿಯಾಪಟ್ಟದ ಉಪ ನೊಂದಣಿ ಕಛೇರಿಯಲ್ಲಿ ಸಹಿ ಮಾಡಿದ್ದೇನೆ. ಅಲ್ಲಿ ಯಾವುದೇ ಫೋಟೋ ತೆಗೆದಿಲ್ಲ. ಅದು ನೊಂದಣಿ ಪತ್ರ ಅಲ್ಲ.

6. ನಿಪಿ-13 ರ ಸ್ಟಾಂಪ್ ವೆಂಡರ್ ವಿಜಯೇಂದ್ರ ರವರು ಆಗ ಪಿರಿಯಾಪಟ್ಟದ ಉಪ ನೊಂದಣಿ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದರು. ಸದರಿ ಪತ್ರವನ್ನು ಯಾರು ತಂದು ಎಂದು ನನಗೆ ಗೊತ್ತಿಲ್ಲ.

7. ನೀವು ಹಾಗೂ ಹರೀಶ ರವರು ಸ್ನೇಹಿತರು ಎಂದರೆ ಆತ್ಮೀಯರು ಎಂದು ನುಡಿಯುತ್ತಾರೆ. ಆ ಕಾರಣಕ್ಕೆ ನೀವು 20 ಸಾವಿರ ಹಣವನ್ನು ನೀಡಿದ್ದಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

8. ನಿಪಿ -13 ರ ಪ್ರಕಾರ ಮಹಾಲಿಂಗಪ್ಪ ನವರು ಯಾವುದೇ ಹಣವನ್ನು ಹರೀಶಪ್ಪ ನವರಿಂದ ಪಡೆದಿಲ್ಲ ಎಂದರೆ ಸರಿಯಲ್ಲ.

9. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ